ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಬಿಎಸ್‌ವೈ ಸಂಪೂರ್ಣ ಸಂಪುಟಕ್ಕೆ ಸಂಕ್ರಮಣ ಕಾಲ

## ಮೂರ್ನಾಲ್ಕು ಸಚಿವರಿಗೆ ಅರ್ಧಚಂದ್ರ- ಆರೇಳು ಶಾಸಕರಿಗೆ ಮಂತ್ರಿಗಿರಿ

12/1/21

ಸಂ.ಕ.ಸಮಾಚಾರ ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪೂರ್ಣಪ್ರಮಾಣದ ಸಚಿವ ಸಂಪುಟ ರಚನೆಯ ಕಸನು ನನಸಾಗುವ ಸಮಯ ಸಮೀಪಿಸಿದ್ದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ರಾಜ್ಯದ ಉಸ್ತುವಾರಿ ಅರುಣ್ ಸಿಂಗ್ ಅವರಿಗೂ ಆಹ್ವಾನ ನೀಡಿದ್ದಾರೆ. ಈ ಮೂಲಕ ಪಕ್ಷದ ರಾಷ್ಟ್ರೀಯ ವರಿಷ್ಠರು ತಮ್ಮ ಜತೆಗಿದ್ದಾರೆ ಎಂದು ಸಂದೇಶ ಸಾರಲು ಯಡಿಯೂರಪ್ಪ ಮುಂದಾಗಿದ್ದಾರೆ.

- ನಡ್ಡಾ-ಅರುಣ್ ಸಿಂಗ್‌ಗೆ ಸಿಎಂ ಆಮಂತ್ರಣ
- ಅಮಾವಾಸ್ಯೆ ಕಳೆದ ತಕ್ಷಣ ಪದಗ್ರಹಣ
- ಕೆಲ ಹಾಲಿ ಸಚಿವರಲ್ಲೂ ತಲ್ಲಣ
- ಖಾತೆಗಳೂ ಬದಲಾಗಬಹುದು ಅಲ್ಪ ಪ್ರಮಾಣ

2011ರಲ್ಲಿ ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಸಿಎಂ ಪದವಿಯಿಂದ ಅನಿವಾರ್ಯ ಸಂದರ್ಭದಲ್ಲಿ ಕೆಳಗಿಳಿದಿದ್ದ ಯಡಿಯೂರಪ್ಪ ಅವರು 2019ರಲ್ಲಿ ಮತ್ತೊಮ್ಮೆ ಸಿಎಂ ಪದವಿ ಏರಿದಾಗ ಯಾವುದೇ ರಾಷ್ಟ್ರೀಯ ನಾಯಕರು ಪಾಲ್ಗೊಂಡಿರಲಿಲ್ಲ. ಹೀಗಾಗಿ ಕಹಿಘಟನೆಯನ್ನು ಮರೆಯುವ ನಿಟ್ಟಿನಲ್ಲಿ ಸಿಎಂ ಯಡಿಯೂರಪ್ಪ ತಮ್ಮ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆಗೆ ರಾಷ್ಟ್ರೀಯ ವರಿಷ್ಠರೂ ಸಾಕ್ಷಿಯಾಗಲಿ ಎಂಬ ಇರಾದೆ ಹೊಂದಿದ್ದಾರೆ. ಅದಕ್ಕೆ ಪೂರಕವಾಗಿ ಜನವರಿ 13 ಅಥವಾ 14ರಂದು ನಡ್ಡಾ ಮತ್ತು ಅರುಣ್ ಸಿಂಗ್ ಅವರ ಸಮಯಾವಕಾಶ ಕೋರಿದ್ದಾರೆ. ವರಿಷ್ಠರೂ ಕೂಡ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದು ಇನ್ನೇನು ದಿನಾಂಕ ಮತ್ತು ಸಮಯ ನಿಗದಿಯಾಗಬೇಕಿದೆ.



"ಸಚಿವ ಸಂಪುಟಕ್ಕೆ ಯಾರನ್ನು ಸೇರ್ಪಡೆ ಮಾಡಬೇಕು ಎಂಬುದರ ಬಗ್ಗೆ ರಾಷ್ಟ್ರೀಯ ವರಿಷ್ಠರು ತೀರ್ಮಾನ ಮಾಡುತ್ತಾರೆ. ಬುಧವಾರ ಮಧ್ಯಾಹ್ನ ಅಮವಾಸ್ಯೆ ಕಳೆದ ಮೇಲೆ ಸಮಾರಂಭ ನಡೆಯುತ್ತದೆ. ರಾಷ್ಟ್ರೀಯ ನಾಯಕರನ್ನೂ ಸಮಾರಂಭಕ್ಕೆ ಆಹ್ವಾನಿಸಿದ್ದು, ಅವರ ಸಮಯ ನೋಡಿಕೊಂಡು ಮುಹೂರ್ತ ನಿಗದಿ ಮಾಡುತ್ತೇನೆ.

■ ಬಿ.ಎಸ್.ಯಡಿಯೂರಪ್ಪ | ಮುಖ್ಯಮಂತ್ರಿ

ಮತ್ತೊಂದೆಡೆ ಸಚಿವ ಸಂಪುಟ ವಿಸ್ತರಣೆ ಮಾಡಬೇಕೋ ಅಥವಾ ಚುಟುಕಾಗಿ ಪುನಾರಚನೆ ಮಾಡಬೇಕೋ ಎಂಬ ಗೊಂದಲಕ್ಕೆ ಸಿಲುಕಿರುವ ಸಿಎಂ ಯಡಿಯೂರಪ್ಪ, ವರಿಷ್ಠರು ಯಾವ ರೀತಿ ಸೂಚನೆ ನೀಡುತ್ತಾರೋ ಹಾಗೆಯೇ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಯಡಿಯೂರಪ್ಪ ಬಯಸಿದಂತೆ ಸಂಪುಟದ ಹಿರಿಯ ಸಚಿವರೂ ಸೇರಿದಂತೆ ಎಂಟು ಹಾಲಿ ಸಚಿವರನ್ನು ಕೈಬಿಟ್ಟು, ಖಾಲಿ ಇರುವ ಏಳು ಸ್ಥಾನ ಸೇರಿದಂತೆ 15 ಮಂದಿ ಹೊಸಬರ ಸೇರ್ಪಡೆಗೆ ವರಿಷ್ಠರು ಒಪ್ಪಿಲ್ಲ. ಹೀಗಾಗಿ ಖಾಲಿ ಇರುವ ಏಳು ಸಚಿವ ಸ್ಥಾನಗಳನ್ನಷ್ಟೇ ಭರ್ತಿ ಮಾಡಬೇಕಾಗಿದೆ.

ಈ ನಡುವೆ ಯಡಿಯೂರಪ್ಪ ಅವರೇ ನಿರ್ಧಾರ ತೆಗೆದುಕೊಳ್ಳಬಹುದಾದ ಮೂರ್ನಾಲ್ಕು ಸಚಿವರನ್ನು ಕೈಬಿಟ್ಟು ಆಗ ಏಳೆಂಟು ಹೊಸಬರನ್ನು ಸೇರ್ಪಡೆ ಮಾಡಿಕೊಳ್ಳಲು ಅನುಕೂಲ ಆಗುತ್ತದೆ ಎಂಬ ಲೆಕ್ಕಾಚಾರವೂ ನಡೆದಿದೆ.

ಪುಟ-09

### ಸಚಿವ ಸ್ಥಾನ ಇವರಿಗೆ ಪಕ್ಕಾ

- ಮುನಿರತ್ನ
- ಎಂಟಿಬಿ ನಾಗರಾಜ್
- ಆರ್.ಶಂಕರ್
- ಉಮೇಶ್ ಕತ್ತಿ
- ಸಿ.ಪಿ.ಯೋಗೀಶ್ವರ್

### ಸಚಿವ ಸ್ಥಾನ ಕಳೆದುಕೊಳ್ಳಬಹುದು

- ಸಿ.ಸಿ.ಪಾಟೀಲ್
- ಶಶಿಕಲಾ ಜೊಲ್ಲೆ
- ಎಚ್.ನಾಗೇಶ್
- ಕೋಟಾ ಶ್ರೀನಿವಾಸ್ ಪೂಜಾರಿ
- ಪ್ರಭು ಚವಾಣ್

### ಸಚಿವ ಸ್ಥಾನ ಇವರಿಗೂ ಸಿಗಬಹುದು

- ಎಸ್.ಅಂಗಾರ
- ಅರವಿಂದ ಲಿಂಬಾವಳಿ
- ವಿ.ಸುನೀಲ್ ಕುಮಾರ್
- ಹಾಲಪ್ಪ ಆಚಾರ್
- ಪೂರ್ಣಿಮಾ ಶ್ರೀನಿವಾಸ್
- ರಾಜುಗೌಡ
- ಜಿ.ಎಚ್.ತಿಪ್ಪಾರೆಡ್ಡಿ
- ಎಂ.ಪಿ.ರೇಣುಕಾಚಾರ್ಯ
- ಮುರುಗೇಶ್ ನಿರಾಣಿ
- ಪ್ರೀತಮ್ ಗೌಡ
- ಪರಣ್ಣ ಮುನವಳ್ಳಿ

17

# ಸಂಪುಟಕ್ಕೆ ಸಂಕ್ರಮಣ ಕಾಲ

ಮೊದಲ ಪುಟದಿಂದ...

ಯಡಿಯೂರಪ್ಪನವರ ಮಾತು ಕೇಳಿ ರಾಜಿನಾಮೆ ಕೊಡಬಹುದಾದ ಕೆಲ ಸಚಿವರನ್ನು ಮನವೊಲಿಸುವ ಕೆಲಸ ನಡೆದಿದೆ. ಸಚಿವರಾದ ಸಿ.ಸಿ.ಪಾಟೀಲ್, ಕೋಟಾ ಶ್ರೀನಿವಾಸ ಪೂಜಾರಿ, ಪ್ರಭು ಚವಾಣ್, ಶಶಿಕಲಾ ಜೊಲ್ಲೆ ಹಾಗೂ ಪ್ರಧಾನಮಂತ್ರಿಗಳ ಕಾರ್ಯಾಲಯದವರೆಗೆ ಭ್ರಷ್ಟಾಚಾರದ ಆರೋಪ ತಲುಪಿದ್ದ ಹಿನ್ನೆಲೆಯಲ್ಲಿ ಅಬಕಾರಿ ಸಚಿವ ಎಚ್.ನಾಗೇಶ್ ಅವರನ್ನು ಸಂಪುಟದಿಂದ ಕೈಬಿಡುವ ಮಾತುಗಳು ಕೇಳಿ ಬರುತ್ತಿವೆ. ಈ ಪೈಕಿ ಇಬ್ಬರಿಂದ ಮೂವರನ್ನು ಕೈಬಿಡುವುದು ಶತಸಿದ್ಧ ಎಂದೂ ಹೇಳಲಾಗುತ್ತಿದೆ.

ಇನ್ನು ಬಿಜೆಪಿ ಸರ್ಕಾರ ರಚನೆಗೆ ನೆರವಾದ ವಲಸಿಗ ಶಾಸಕರಿಗೆ ಸಚಿವ ಪದವಿ ಸಿಗುವುದರಲ್ಲಿ ಅನುಮಾನವೇ ಇಲ್ಲ. ಜೊತೆಗೆ ಸರ್ಕಾರ ರಚನೆ ವೇಳೆ ಮುಂಚೂಣಿಯಲ್ಲಿದ್ದ ಪರಿಷತ್ ಸದಸ್ಯ ಸಿ.ಪಿ.ಯೋಗೀಶ್ವರ್ ಕೂಡ ಮತ್ತೆ ಸಚಿವರಾಗಲಿದ್ದಾರೆ. ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆಯಲ್ಲಿ ಹಿರಿಯ ಶಾಸಕ ಉಮೇಶ್ ಕತ್ತಿ ಅವರಿಗೂ ಸಚಿವ ಸ್ಥಾನ ದಕ್ಕಲಿದೆ. ಇದಾದ ನಂತರ ಉಳಿದ ಮೂರು ಸ್ಥಾನಗಳಿಗೆ ಭಾರಿ ಲಾಬಿ ಆರಂಭವಾಗಿದೆ. ಸರಿಸುಮಾರು 15 ಮಂದಿ ಆಕಾಂಕ್ಷಿಗಳು ಉಳಿದ ಮೂರು ಸ್ಥಾನಗಳಿಗೆ ಪೈಪೋಟಿ ನಡೆಸಿದ್ದಾರೆ. ಯಾರು ಏನೇ ಲಾಬಿ ನಡೆಸಿದರೂ ವರಿಷ್ಠರು ಕಳಿಸುವ ಪಟ್ಟಿಯಲ್ಲಿ ಇರುವ ಹೆಸರುಗಳು ಯಾವವು ಎಂಬುದು ಈ ತನಕ ಯಡಿಯೂರಪ್ಪ ಅವರಿಗೂ ಗೊತ್ತಿರುವಂತೆ ಕಾಣುತ್ತಿಲ್ಲ.

ಹೀಗಾಗಿ ಸಿಎಂ ಯಡಿಯೂರಪ್ಪ ಮಾತುಮಾತಿಗೂ ವರಿಷ್ಠರ ಕಡೆಗೆ ಬೊಟ್ಟು ಮಾಡುತ್ತಿದ್ದಾರೆ. ಇತ್ತೀಚೆಗೆ ಪರಿಷತ್ ಮತ್ತು ರಾಜ್ಯಸಭೆ ಚುನಾವಣೆಗೆ ರಾಜ್ಯ ಕೋರ್ ಕಮಿಟಿಯ ಶಿಫಾರಸುಗಳನ್ನು ಸಾರಾಸಗಟಾಗಿ ವರಿಷ್ಠರು ತಿರಸ್ಕರಿಸಿ, ಅಚ್ಚರಿಯ ಹೆಸರುಗಳನ್ನು ಅಂತಿಮಗೊಳಿಸಿದ್ದರು. ಹೀಗಾಗಿ ಸಿಎಂ ಯಡಿಯೂರಪ್ಪ ಈಗಲೂ ಅದೇ ಎಚ್ಚರಿಕೆಯಿಂದ ಯಾರ ಹೆಸರನ್ನೂ ಬಹಿರಂಗಪಡಿಸದೇ ವರಿಷ್ಠರ ಕಡೆಗೆ ನೋಡುತ್ತಿದ್ದಾರೆ. ಅನಿರೀಕ್ಷಿತ ಬೆಳವಣಿಗೆಗಳೇನೂ ಸಂಭವಿಸದೇ ಹೋದರೆ ಬುಧವಾರ ಬೆಳಗ್ಗೆ ಹೊತ್ತಿಗೆ ಸಚಿವರ ಅಂತಿಮ ಪಟ್ಟಿ ಯಡಿಯೂರಪ್ಪ ಕೈಸೇರುವ ಸಾಧ್ಯತೆಗಳಿವೆ.